# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು - 572 103

ದೂರವಾಣಿ : 0816-2254546 0816-2255596, 0816-2255597 ಫ್ಯಾಕ್ಸ್ : 0816-2270719


ಸಂಖ್ಯೆ: ತುವಿ:ಶೈ.ವಿ:2021-22 1695 ದಿನಾಂಕ:07.07.2021

## : ಸುತ್ತೋಲೆ :

ವಿಷಯ:2020-21 ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಕೋಟಾದಡಿಯಲ್ಲಿ ಹಂಚಿಕೆಯಾಗಿ ಖಾಲಿ ಉಳಿದ/ ಉಳಿಯುವ ಬಿ.ಇಡಿಸೀಟುಗಳನ್ನು ಆಡಳಿತ ಮಂಡಳಿಯ ಕೋಟಾದಡಿಯಲ್ಲಿ ಭರ್ತಿಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ:ಇಡಿ 168 ಯುಆರ್‌ಸಿ 2019 ದಿನಾಂಕ:02.07.2021
2) ಅಧಿಸೂಚನೆ ಸಂಖ್ಯೆ: ತುವಿ:ಶೈವಿ:ಬಿ.ಇಡಿ:2019-20:2301 ದಿನಾಂಕ:16.04.2021
3) ಸುತ್ತೋಲೆ ಸಂಖ್ಯೆ: 2021-22: ದಿನಾಂಕ :16.06.2021
4) ಮಾನ್ಯ ಕುಲಪತಿಯವರ ಅನುಮೋದನೆ (ಕಂಡಿಕೆ-62) ದಿನಾಂಕ:03.07.2021.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(01) ರ ಸರ್ಕಾರದ ಆದೇಶದಂತೆ 2020-21 ನೇ ಶೈಕ್ಷಣಿಕ ಸಾಲಿನ ಬಿ.ಇಡಿ ಕೋರ್ಸಿಗೆ ಸರ್ಕಾರಿ ಕೋಟಾದಡಿಯಲ್ಲಿ ಹಂಚಿಕೆಯಾಗಿ ಖಾಲಿ ಉಳಿದ/ಉಳಿಯುವ ಸೀಟುಗಳನ್ನು ಸರ್ಕಾರವು ವಿಧಿಸಿರುವ ಷರತ್ತುಗಳನ್ನು ಪಾಲಿಸಿಕೊಂಡು ಆಡಳಿತ ಮಂಡಳಿಯ ಕೋಟಾದಡಿಯಲ್ಲಿ ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ಈ ಮೂಲಕ ಅನುಮತಿಸಲಾಗಿದೆ.

ಕೇಂದ್ರಿಯ ದಾಖಲಾತಿ ಘಟಕದಿಂದ ಸರ್ಕಾರಿ ಕೋಟಾದ ಉಳಿಕೆ ಸೀಟುಗಳನ್ನು ಆಡಳಿತ ಮಂಡಳಿ ಕೋಟಾ ಸೀಟುಗಳಾಗಿ ಪರಿವರ್ತಿಸಿ ಪ್ರವೇಶಾತಿ ಮಾಡಿಕೊಳ್ಳುವ ಸಂಬಂಧ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಿದೆ.

| | | |
|---|---|---|
| 1 | ಸರ್ಕಾರಿ ಕೋಟಾ ಸೀಟುಗಳನ್ನು ಆಡಳಿತ ಮಂಡಳಿ ಸೀಟುಗಳಾಗಿ ಪರಿವರ್ತಿಸಿ ಭರ್ತಿ ಮಾಡಿಕೊಳ್ಳಲು ನಿಗದಿಪಡಿಸಿರುವ ಕೊನೆಯ ದಿನಾಂಕ (ದಂಡಶುಲ್ಕವಿಲ್ಲದೆ) | 17.07.2021 |
| 2 | ಪ್ರವೇಶಾತಿ ಪಟ್ಟಿಯನ್ನು ತ್ರಿಪ್ರತಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ | 25.07.2021 |

ಸರ್ಕಾರಿ ಕೋಟಾ ಮತ್ತು ಪರಿವರ್ತಿತ ಕೋಟಾ ವಿದ್ಯಾರ್ಥಿಗಳಿಗೆ ಉಂಟಾಗುವ ಹಾಜರಾತಿ ಕೊರತೆಯನ್ನು ಬಿ.ಇಡಿ ವಿನಿಯಮದನ್ವಯ ಕನಿಷ್ಠ ಹಾಜರಾತಿಯನ್ನು ವಿಶೇಷ ತರಗತಿಗಳನ್ನು ತೆಗೆದುಕೊಂಡು ಸರಿದೂಗಿಸುವಂತೆ ತಿಳಿಸುತ್ತಾ ಉಲ್ಲೇಖ(02)ರ ಅಧಿಸೂಚನೆಯಲ್ಲಿ ಇನ್ನಾವುದೇ ಬದಲಾವಣೆ ಇರುವುದಿಲ್ಲವೆಂದು ಸೂಚಿಸಿದೆ.

ಪ್ರವೇಶಾತಿ ಪಟ್ಟಿಯನ್ನು ತ್ರಿಪ್ರತಿಯೊಂದಿಗೆ ಸರ್ಕಾರಿ ಕೋಟಾ/ಆಡಳಿತ ಮಂಡಳಿಯ ಕೋಟಾ/ ಪರಿವರ್ತಿತ ಕೋಟಾ ಸೀಟುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಸಹ ಪ್ರತ್ಯೇಕವಾಗಿ ಕಡ್ಡಾಯವಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಸೂಚಿಸಿದೆ.

ಸರ್ಕಾರದ ಆದೇಶವನ್ನು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣ www.tumkuruniversity.ac.in ನಲ್ಲಿ ಪ್ರಕಟಿಸಲಾಗಿದ್ದು ಸದರಿ ಆದೇಶದಲ್ಲಿನ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿ ಪ್ರವೇಶಾತಿಯನ್ನು ಮಾಡಿಕೊಳ್ಳುವುದೆಂದು ಈ ಮೂಲಕ ತಿಳಿಸಿದೆ.

ಆದೇಶದ ಮೇರೆಗೆ,

ಕುಲಸಚಿವರು

Registrar
Tumkur University
Tumkur

ಗೆ,

ಪ್ರಾಂಶುಪಾಲರುಗಳು, ಎಲ್ಲಾ ಸಂಯೋಜಿತ ಶಿಕ್ಷಣ ಮಹಾವಿದ್ಯಾಲಯಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು :

1. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.- ವಿ.ವಿ. ಜಾಲತಾಣದಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.
3. ಕಚೇರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2020-21ನೇ ಸಾಲಿನಲ್ಲಿ ಸರ್ಕಾರದ ಕೋಟಾದಡಿ ಹಂಚಿಕೆಯಾಗಿ ಖಾಲಿ ಉಳಿದ/ಉಳಿಯುವ ಬಿ.ಇಡಿ ಸೀಟುಗಳನ್ನು ಆಡಳಿತ ಮಂಡಳಿಯ ಕೋಟಾದಡಿ ಭರ್ತಿ ಮಾಡಿಕೊಳ್ಳಲು ಉನ್ನತ ಶಿಕ್ಷಣ ಇಲಾಖೆ ಅಧೀನದ ಸಂಯೋಜನೆಗೊಳಿಸುವ ವಿಶ್ವವಿದ್ಯಾಲಯಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿಗಳಲ್ಲಿನ ಶಿಕ್ಷಣ ಮಹಾವಿದ್ಯಾಲಯಗಳಿಗೆ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ:ಇಡಿ 64 ಯುಬಿವಿ 2016, ದಿನಾಂಕ:03.05.2016
2. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಇಡಿ 70 ಯುಬಿವಿ 2016, ದಿನಾಂಕ:27.05.2016
3. ಸರ್ಕಾರದ ಆದೇಶ ಸಂಖ್ಯೆ:ಇಡಿ 77 ಯುಬಿವಿ 2017, ದಿನಾಂಕ:07.04.2017
4. ಸರ್ಕಾರದ ಆದೇಶ ಸಂಖ್ಯೆ:ಇಡಿ 21 ಯುಟಿಟಿ 2018, ದಿನಾಂಕ:12.04.2018
5. ಸರ್ಕಾರದ ಆದೇಶ ಸಂಖ್ಯೆ:ಇಡಿ 389 ಯುಆರ್‌ಸಿ 2018, ದಿನಾಂಕ:22.11.2018
6. ಸರ್ಕಾರದ ಆದೇಶ ಸಂಖ್ಯೆ:ಇಡಿ 168 ಯುಆರ್‌ಸಿ 2019, ದಿನಾಂಕ:11.11.2019

---

**ಪ್ರಸ್ತಾವನೆ:-**

ಶಿಕ್ಷಣ ಬೋಧನೆಯ ವ್ಯಾಸಂಗ ಕ್ರಮಗಳಾದ ಟಿ.ಸಿ.ಹೆಚ್. ಹಾಗೂ ಬಿ.ಇಡಿ ಕೋರ್ಸುಗಳ ದಾಖಲಾತಿ ಪ್ರಕ್ರಿಯೆಯನ್ನು ವಿನಿಯಮಗೊಳಿಸಲು ಮೇಲೆ ಓದಲಾದ Karnataka Selection of Candidates for admission to Teachers Certificate Higher Course (TCH) and Bachelor of Education Course (B.Ed) Rules, 1999 ರ ನಿಯಮ 7ರ ಉಪನಿಯಮ (8)ರಲ್ಲಿ ಈ ಕೆಳಕಂಡಂತೆ ಉಪಬಂಧಿಸಲಾಗಿದೆ.

*"(8) For the seats remaining vacant even after re-allotment and counseling, further counseling shall be done by selecting the candidates from out of the waiting list by reducing the cut off percentage under the category in which vacancies exist. This process shall be continued till all the vacant seats are filled up in all the categories under Government Seats, until the list of eligible candidates is exhausted. Seats still remaining vacant shall be filled up by management only if the Government issues specific orders in this regard."*

---2

ಪೂರ್ವೋಕ್ತ ನಿಯಮದಲ್ಲಿ ಉಪಬಂಧಿಸಲಾಗಿರುವಂತೆ ಸರ್ಕಾರಿ ಕೋಟಾದಡಿಯ ಎಲ್ಲಾ ಪ್ರವರ್ಗಗಳಲ್ಲಿನ ಖಾಲಿ ಸೀಟುಗಳನ್ನು ಭರ್ತಿ ಮಾಡುವವರೆಗೆ ಮರುಹಂಚಿಕೆ ಹಾಗೂ ಮರುಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಮುಂದುವರೆಸಬೇಕಾಗುತ್ತದೆ. ತದನಂತರದಲ್ಲಿಯೂ ಖಾಲಿ ಉಳಿಯುವ ಸೀಟುಗಳನ್ನು ಸರ್ಕಾರವು ನಿರ್ದಿಷ್ಟ ಆದೇಶ ಹೊರಡಿಸುವ ಮೂಲಕ ಅನುಮತಿಸಿದಲ್ಲಿ ಮಾತ್ರ ಆಡಳಿತ ಮಂಡಳಿಯಿಂದ ಭರ್ತಿ ಮಾಡಿಕೊಳ್ಳಬಹುದಾಗಿರುತ್ತದೆ.

2016ನೇ ಸಾಲಿನವರೆಗೆ ಅನುಸರಿಸಿಕೊಂಡು ಬರಲಾದಂತೆ, ಸರ್ಕಾರದ ಕೋಟಾದಡಿ ಖಾಲಿ ಉಳಿಯುವ ಸೀಟುಗಳನ್ನು ಆಡಳಿತ ಮಂಡಳಿಯಿಂದ ಭರ್ತಿ ಮಾಡಲು ಆಯಾ ವಿಶ್ವವಿದ್ಯಾಲಯದಡಿಯ ಕಾಲೇಜುಗಳಿಗೆ ಪ್ರತ್ಯೇಕವಾಗಿ ಅನುಮತಿ ನೀಡುವ ವ್ಯವಸ್ಥೆಯಿಂದಾಗಿ ಪ್ರವೇಶ ದಾಖಲಾತಿ ಪ್ರಕ್ರಿಯೆಯಲ್ಲಿ ತೊಂದರೆಗಳು ಎದುರಾಗುತ್ತಿರುವುದನ್ನು ಹಾಗೂ ವಿಳಂಬ ಉಂಟಾಗುತ್ತಿರುವುದನ್ನು ಗಮನಿಸಿದ ಹಾಗೂ ಗಂಭೀರವಾಗಿ ಪರಿಗಣಿಸಿದ ಸರ್ಕಾರವು ಈ ಪ್ರಕ್ರಿಯೆಯನ್ನು ಸರಳೀಕರಿಸುವ ಮೂಲಕ ಎಲ್ಲಾ ಅಡಚಣೆಗಳನ್ನು ನಿವಾರಿಸಿ ಪ್ರವೇಶ ದಾಖಲಾತಿಗಳನ್ನು ಕಾಲಬದ್ಧವಾಗಿ ಹಾಗೂ ಪರಿಣಾಮಕಾರಿ ರೀತಿಯಲ್ಲಿ ಪೂರ್ಣಗೊಳಿಸುವ ಅಗತ್ಯತೆಯನ್ನು ಮನಗಂಡು, 2016ನೇ ಸಾಲಿನಿಂದ ಸರ್ಕಾರದ ಅನುಮತಿಯನ್ನು ರಾಜ್ಯದ ವಿಶ್ವವಿದ್ಯಾಲಯಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿಗೊಳಪಡುವ ಎಲ್ಲಾ ಶಿಕ್ಷಣ ಮಹಾವಿದ್ಯಾಲಯಗಳಿಗೆ ಏಕಕಾಲದಲ್ಲಿ ಸಾಮಾನ್ಯವಾಗಿ ಅನ್ವಯಿಸುವಂತೆ ಸೂತ್ರೀಕರಿಸುವಂತಹ ಸಮಗ್ರ ಕಾರ್ಯನೀತಿಯನ್ನು ರೂಪಿಸಲಾಗಿದೆ.

ಅದರಂತೆ 2015-16ನೇ ಸಾಲಿನಲ್ಲಿ ಸರ್ಕಾರದ ಕೋಟಾದಡಿ ಖಾಲಿ ಉಳಿಯುವ ಬಿ.ಇಡಿ ಸೀಟುಗಳನ್ನು ಆಡಳಿತ ಮಂಡಳಿಯಿಂದ ಭರ್ತಿ ಮಾಡಲು Karnataka Selection of Candidates for admission to Teachers Certificate Higher Course (TCH) and Bachelor of Education Course (B.Ed) Rules, 1999 ರ ನಿಯಮ 7ರ ಉಪನಿಯಮ (8)ರನ್ವಯ ಅವಶ್ಯಕವಾದ ಸರ್ಕಾರದ ಅನುಮತಿಯನ್ನು ರಾಜ್ಯದ ವಿಶ್ವವಿದ್ಯಾಲಯಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿಗೊಳಪಡುವ ಎಲ್ಲಾ ಶಿಕ್ಷಣ ಮಹಾವಿದ್ಯಾಲಯಗಳಿಗೆ ಏಕಕಾಲದಲ್ಲಿ ಸಾಮಾನ್ಯವಾಗಿ ಅನ್ವಯಿಸುವಂತೆ ಮೇಲೆ ಕ್ರಮಸಂಖ್ಯೆ(1)ರ ಮತ್ತು (2)ರಲ್ಲಿ ಜೊತೆಯಲ್ಲಿ ಓದಲಾದ ಆದೇಶಗಳಲ್ಲಿ ನೀಡಲಾಗಿದೆ. ಮುಂದುವರೆದು ಇದೇ ಕಾರ್ಯನೀತಿಯನ್ನು ಮೇಲೆ ಕ್ರಮಸಂಖ್ಯೆ(3), ಕ್ರಮಸಂಖ್ಯೆ(4), ಕ್ರಮಸಂಖ್ಯೆ(5) ಹಾಗೂ ಕ್ರಮಸಂಖ್ಯೆ(6) ರಲ್ಲಿ ಓದಲಾಗದ ಆದೇಶಗಳನ್ವಯ ಅನುಕ್ರಮವಾಗಿ 2016-17ನೇ, 2017-18ನೇ 2018-19ನೇ ಹಾಗೂ 2019-20ನೇ ಶೈಕ್ಷಣಿಕ ಸಾಲುಗಳಲ್ಲಿಯೂ ಅನುಸರಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಕೋಟಾದಡಿ ಖಾಲಿ ಉಳಿಯುವ ಸೀಟುಗಳನ್ನು ಆಡಳಿತ ಮಂಡಳಿಯಿಂದ ಭರ್ತಿ ಮಾಡುವ ಪ್ರಕ್ರಿಯೆಯನ್ನು ಸರಳೀಕರಿಸಲು 2016ನೇ ಸಾಲಿನಲ್ಲಿ ರೂಪಿಸಲಾಗಿರುವ ಸಮಗ್ರ ವ್ಯವಸ್ಥೆಯನ್ನು, ಉನ್ನತ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ವಿಶ್ವವಿದ್ಯಾಲಯಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿಗೊಳಪಟ್ಟು ಕೇಂದ್ರೀಯ ದಾಖಲಾತಿ ಘಟಕದಲ್ಲಿ ನೋಂದಣಿಯಾಗಿರುವ ಎಲ್ಲಾ ಬಿ.ಎಡ್. ಕಾಲೇಜುಗಳಿಗೆ 2020-21ನೇ ಸಾಲಿನಲ್ಲಿ

ಅನ್ವಯಿಸುವುದು ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಯುಕ್ತ ಹಾಗೂ ಅವಶ್ಯಕವೆಂದು ತೀರ್ಮಾನಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ..

**ಸರ್ಕಾರಿ ಆದೇಶ ಸಂಖ್ಯೆ: ಇಡಿ/124/ಯುಆರ್‌ಸಿ/2021, ಬೆಂಗಳೂರು, ದಿನಾಂಕ: 02.07.2021**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ ರಾಷ್ಟ್ರೀಯ ಬೋಧಕ ಶಿಕ್ಷಣ ಮಂಡಳಿಯ(ಓ.ಅ.ಖ.ಇ) ಮಾನ್ಯತೆ ಹೊಂದಿರುವ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸಂಯೋಜನೆಗೊಳಿಸುವ ವಿಶ್ವವಿದ್ಯಾಲಯಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿಗೊಳಪಡುವ/ಸಂಯೋಜನೆ ಹೊಂದಿರುವ ಎಲ್ಲಾ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ 2019-20ನೇ ಸಾಲಿಗೆ ಹಂಚಿಕೆಯಾಗದೇ ಸರ್ಕಾರಿ ಕೋಟಾದಡಿ ಖಾಲಿ ಉಳಿದಿರುವ ಹಾಗೂ ಹಂಚಿಕೆಯಾದ ಸೀಟುಗಳ ಪೈಕಿ ವಿದ್ಯಾರ್ಥಿಗಳು ದಾಖಲಾಗದೇ ಮರುಹಂಚಿಕೆ ಅಥವಾ ಮರುಕೌನ್ಸಿಲಿಂಗ್ ನಂತರವು ಖಾಲಿ ಉಳಿಯುವ ಸೀಟುಗಳು ಸೇರಿದಂತೆ ಸರ್ಕಾರಿ ಕೋಟಾದಡಿಯಲ್ಲಿ ಒಟ್ಟಾರೆಯಾಗಿ ಖಾಲಿ ಉಳಿಯುವ ಬಿ.ಇಡಿ ಸೀಟುಗಳನ್ನು ಸಂದರ್ಭಾನುಸಾರ ವಿಶ್ವವಿದ್ಯಾಲಯಗಳು ನಿಗದಿಪಡಿಸಿದ ಅಂತಿಮ ಕಾಲಾವಧಿ ಅಥವಾ ವಿಸ್ತರಿಸಲಾಗುವ ಕಾಲಮಿತಿಯೊಳಗಾಗಿ ಆಯಾ ಕಾಲೇಜುಗಳ ಆಡಳಿತ ಮಂಡಳಿಯಿಂದ ಭರ್ತಿ ಮಾಡಲು ಏಚಿಡಿಟಚಿಣಚಿಞಚಿ Karnataka Selection of Candidates for admission to Teachers Certificate Higher Course (TCH) and Bachelor of Education Course (B.Ed) Rules, 1999ರ ನಿಯಮ 7ರ ಉಪನಿಯಮ (8)ರನ್ವಯ ಸರ್ಕಾರದ ಅನುಮತಿ ನೀಡಿ ಆದೇಶಿಸಿದೆ.

ಸರ್ಕಾರದ ಕೋಟಾದಡಿ ಖಾಲಿ ಉಳಿದಿರುವ ಬಿ.ಇಡಿ. ಸೀಟುಗಳನ್ನು ಉನ್ನತ ಶಿಕ್ಷಣ ಇಲಾಖೆ ಅಧೀನದ ಎಲ್ಲಾ ವಿಶ್ವವಿದ್ಯಾಲಯಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿಗೊಳಪಡುವ/ಸಂಯೋಜನೆ ಹೊಂದಿರುವ ಕಾಲೇಜುಗಳ ಆಡಳಿತ ಮಂಡಳಿಗಳಿಂದ ಭರ್ತಿ ಮಾಡಲು ಒಂದು ವೇಳೆ ಈ ಆದೇಶಕ್ಕೂ ಪೂರ್ವದಲ್ಲಿ ಕಾಲೇಜುವಾರು ಪ್ರತ್ಯೇಕವಾಗಿ ಸರ್ಕಾರದ ಅನುಮತಿಯನ್ನು ನೀಡಲಾಗಿದ್ದಲ್ಲಿ, ಅಂತಹ ಪ್ರಕರಣಗಳು ಈ ಆದೇಶದ ಪರಿವ್ಯಾಪ್ತಿಗೆ ಒಳಪಡುವುದಾಗಿ ಭಾವಿಸತಕ್ಕದ್ದು.

ಈ ಆದೇಶವನ್ನು ವಿಶ್ವವಿದ್ಯಾಲಯಗಳ ಜಾಲತಾಣಗಳಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.

ಈ ಆದೇಶದನ್ವಯ ನೀಡಲಾದ ಅನುಮತಿ ಮೇರೆಗೆ ಆಡಳಿತ ಮಂಡಳಿಗಳಿಂದ ಭರ್ತಿ ಮಾಡಿಕೊಳ್ಳಲಾಗುವ ಸರ್ಕಾರದ ಕೋಟಾದಡಿಯ ಖಾಲಿ ಉಳಿದ ಬಿ.ಇಡಿ. ಸೀಟುಗಳ ದಾಖಲಾತಿ ಅನುಮೋದನೆ ಪ್ರಕ್ರಿಯೆಯನ್ನು

ಯಾವುದೇ ವಿಳಂಬವಿಲ್ಲದೇ ಕಾಲಬದ್ಧವಾಗಿ ವಿಶ್ವವಿದ್ಯಾಲಯಗಳು ಜರುಗಿಸತಕ್ಕದ್ದು. ಈ ಆದೇಶವನ್ನು ಉಲ್ಲಂಘಿಸುವ ಅಥವಾ ಪಾಲಿಸಲು ಉದ್ದೇಶಪೂರ್ವಕವಾಗಿ ನಿರಾಕರಿಸುವ ಹಾಗೂ ದಾಖಲಾತಿ ಅನುಮೋದನೆಯಲ್ಲಿ ಕಾಲೇಜುಗಳಿಗೆ ತೊಂದರೆ ನೀಡುವ ವಿಶ್ವವಿದ್ಯಾಲಯಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು.

ಸರ್ಕಾರದ ಕೋಟಾದಡಿ ಖಾಲಿ ಉಳಿದಿರುವ ಬಿ.ಇಡಿ. ಸೀಟುಗಳನ್ನು ಕಾಲೇಜುಗಳ ಆಡಳಿತ ಮಂಡಳಿಗಳಿಂದ ಭರ್ತಿ ಮಾಡಲು ನೀಡಲಾಗಿರುವ ಪೂರ್ವೋಕ್ತ ಅನುಮತಿಯು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಿರುತ್ತದೆ.

i ಸರ್ಕಾರಿ ಕೋಟಾದಡಿ ಹಂಚಿಕೆಯಾಗದೇ ಖಾಲಿ ಉಳಿದಿರುವ ಸೀಟುಗಳು ಹಾಗೂ ಹಂಚಿಕೆಯಾದ ಸೀಟುಗಳ ಪೈಕಿ ವಿದ್ಯಾರ್ಥಿಗಳು ದಾಖಲಾಗದೇ ಮರುಹಂಚಿಕೆ ಅಥವಾ ಮರುಕೌನ್ಸಿಲಿಂಗ್ ನಂತರವು ಖಾಲಿ ಉಳಿದಿರುವ ಸೀಟುಗಳ ಸಂಖ್ಯೆಗಳ ನೈಜತೆ ಹಾಗೂ ನಿಖರತೆ ಕೇಂದ್ರೀಕೃತ ದಾಖಲಾತಿ ಘಟಕದ ಅಂಕಿ-ಅಂಶಗಳನ್ನು ಆಧರಿಸಿರತಕ್ಕದ್ದು. ಅಂದರೆ ಈ ಸಂಬಂಧದಲ್ಲಿ ಕೇಂದ್ರೀಕೃತ ದಾಖಲಾತಿ ಘಟಕದ ಅಂಕಿ-ಅಂಶಗಳೇ ಅಂತಿಮ;

ii ನೈಜ ಖಾಲಿ ಸೀಟುಗಳನ್ನು ಮೀರಿ ಭರ್ತಿ ಮಾಡಿಕೊಳ್ಳಲಾಗುವ ದಾಖಲಾತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ;

iii ಸರ್ಕಾರಿ ಕೋಟಾದಡಿ ಸರ್ಕಾರದ ಕೋಟಾದಡಿ ಖಾಲಿ ಉಳಿದಿರುವ ಸೀಟುಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಮೇಲೆ ವಿಶ್ವವಿದ್ಯಾಲಯಗಳು ನಿಗಾ ಇಡತಕ್ಕದ್ದು;

iv ಸರ್ಕಾರಿ ಕೋಟಾದಡಿಯ ಸೀಟುಗಳನ್ನು ಭರ್ತಿಮಾಡಿಕೊಂಡಿರುವುದರಲ್ಲಿ ಲೋಪ/ವ್ಯತಿಕ್ರಮಗಳು ಕಂಡುಬಂದಲ್ಲಿ ವಿಶ್ವವಿದ್ಯಾಲಯಗಳು ಸಂಬಂಧಿಸಿದ ಕಾಲೇಜುಗಳ ವಿರುದ್ಧ ಕಠಿಣ ಕ್ರಮಜರುಗಿಸತಕ್ಕದ್ದು;

v ಸರ್ಕಾರವು ವಿಧಿಸಿರುವ ಶುಲ್ಕವನ್ನು ಹಾಗೂ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ಇತರೇ ಶುಲ್ಕಗಳನ್ನು ಮಾತ್ರ ತೆಗೆದುಕೊಳ್ಳತಕ್ಕದ್ದು.

vi ಸರ್ಕಾರದ ಕೋಟಾದಡಿ ಖಾಲಿ ಉಳಿದಿರುವ ಸೀಟುಗಳನ್ನು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಮಾತ್ರ ಕಡ್ಡಾಯವಾಗಿ ಮೀಸಲಿಡತಕ್ಕದ್ದು; ಒಂದು ವೇಳೆ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳು ಲಭ್ಯವಾಗದ ಅನಿವಾರ್ಯ ಹಾಗೂ ವಿರಳ ಸಂದರ್ಭಗಳಲ್ಲಿ ಮಾತ್ರ ಹತ್ತು ವರ್ಷಗಳಿಗೆ ಕಡಿಮೆ ಇರದ ಅವಧಿಯಿಂದ ಕರ್ನಾಟಕದಲ್ಲಿ ವಾಸಿಸುತ್ತಿರುವ ಅನ್ಯ ರಾಜ್ಯದ ವಿದ್ಯಾರ್ಥಿಗಳನ್ನು ಪರಿಗಣಿಸಬಹುದಾಗಿದ್ದು, ಹತ್ತು ವರ್ಷಗಳಿಗೆ ಕಡಿಮೆ ಇರದ ಅವಧಿಯಿಂದ ವಾಸಿಸುತ್ತಿರುವುದಕ್ಕೆ ಪೂರಕವಾಗಿ ದಾಖಲೆಗಳನ್ನು ಸಂಬಂಧಿಸಿದ ವಿಶ್ವವಿದ್ಯಾಲಯಗಳಿಗೆ ಸಲ್ಲಿಸತಕ್ಕದ್ದು

vii ಸರ್ಕಾರಿ ಕೋಟಾದಡಿಯ ಖಾಲಿ ಸೀಟುಗಳ ಪ್ರವೇಶ ದಾಖಲಾತಿ ಪ್ರಕ್ರಿಯೆಯನ್ನು ಸಂದರ್ಭಾನುಸಾರ ವಿಶ್ವವಿದ್ಯಾಲಯಗಳು ನಿಗದಿಪಡಿಸಿದ ಅಂತಿಮ ಕಾಲಾವಧಿಯೊಳಗೆ ಪೂರ್ಣಗೊಳಿಸತಕ್ಕದ್ದು. ಒಂದು ವೇಳೆ, ಈ ಆದೇಶದ ದಿನಾಂಕದಂದು ಕಾಲಾವಧಿ ಮುಕ್ತಾಯಗೊಂಡಿದ್ದಲ್ಲಿ, ಕಾಲಮಿತಿಯನ್ನು 2 ವಾರ ವಿಸ್ತರಿಸತಕ್ಕದ್ದು..

viii ಈಗಾಗಲೇ ತರಗತಿಗಳು ಪ್ರಾರಂಭವಾಗಿದ್ದಲ್ಲಿ ವಿಳಂಬವಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ಏರ್ಪಡಿಸುವ ಮೂಲಕ ಪಠ್ಯಕ್ರಮವನ್ನು ಪೂರ್ಣಗೊಳಿಸತಕ್ಕದ್ದು.

ix ಸರ್ಕಾರಿ ಕೋಟಾದಡಿ ಖಾಲಿ ಉಳಿದ ಬಿ.ಇಡಿ ಸೀಟುಗಳನ್ನು ಆಡಳಿತ ಮಂಡಳಿಯಿಂದ ಭರ್ತಿ ಮಾಡಿಕೊಳ್ಳಲಾಗಿರುವ ಸಂಪೂರ್ಣ ವಿವರಗಳನ್ನು 15 ದಿನಗಳ ಒಳಗಾಗಿ ಸಂಬಂಧಿಸಿದ ವಿಶ್ವವಿದ್ಯಾಲಯಗಳಿಗೆ ವರದಿ ಮಾಡತಕ್ಕದ್ದು. ತಪ್ಪಿದಲ್ಲಿ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳ ಪ್ರವೇಶ ದಾಖಲಾತಿಗೆ ಮಾನ್ಯತೆಯನ್ನು ನೀಡತಕ್ಕದ್ದಲ್ಲ.

x ಹೈದರಾಬಾದ್-ಕರ್ನಾಟಕದ ಮೀಸಲಾತಿ ಸೀಟುಗಳನ್ನು ನಿಯಮಾನುಸಾರ ಭರ್ತಿ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Mahesh

(ಮಹೇಶ್ ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-2)

02/07/2021

ಇವರಿಗೆ:-

1) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
2) ಕುಲಪತಿಗಳು/ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056.
3) ಕುಲಪತಿಗಳು/ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು-570 005.
4) ಕುಲಪತಿಗಳು/ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580 003.
5) ಕುಲಪತಿಗಳು/ಕುಲಸಚಿವರು, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗ-585 106.
6) ಕುಲಪತಿಗಳು/ಕುಲಸಚಿವರು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು-574 199.
7) ಕುಲಪತಿಗಳು/ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಬಿ.ಆರ್. ಪ್ರಾಜೆಕ್ಟ್-577 451.
8) ಕುಲಪತಿಗಳು/ಕುಲಸಚಿವರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು-572 101.
9) ಕುಲಪತಿಗಳು/ಕುಲಸಚಿವರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ-586 101.
10) ಕುಲಪತಿಗಳು/ಕುಲಸಚಿವರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ
11) ಕುಲಪತಿಗಳು/ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾಂ.
12) ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.
13) ಕುಲಪತಿಗಳು/ಕುಲಸಚಿವರು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು

14)ಕುಲಪತಿಗಳು/ಕುಲಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ದೇವರಾಜ್ ಅರಸು ಬಡಾವಣೆ, ಟಮಕ, ಕೋಲಾರ.

15) ಕುಲಪತಿಗಳು/ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

16)ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು

17)ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬನಶಂಕರಿ 3ನೇ ಹಂತ, ಬೆಂಗಳೂರು-85

18)ವಿಶೇಷಾಧಿಕಾರಿ, ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು.

ಪ್ರತಿ:-ಮಾಹಿತಿಗಾಗಿ

1) ಮಾನ್ಯ ಉಪ ಮುಖ್ಯಮಂತ್ರಿಗಳು(ಉನ್ನತ ಶಿಕ್ಷಣ) ಇವರ ಆಪ್ತಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.

2) ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1)

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿ.

3) ಸರ್ಕಾರದ ಜಂಟಿ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು) ಇವರ ಆಪ್ತ ಸಹಾಯಕರು

4) ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ ಹಾಗೂ ತಾಂತ್ರಿ ಶಿಕ್ಷಣ) ಇವರ ಆಪ್ತ ಸಹಾಯಕರು.